Karnatak Law Society's
**Vishwanathrao Deshpande Institute of Technology**
(Approved by AICTE, New Delhi, Affiliated to VTU, Belagavi)
(Recognised Under Section 2(f) by UGC, New Delhi)
Udyog Vidya Nagar, Haliyal - 581329, Dist: Uttar Kannada (Karnataka)
Phone: 08284-220861, 220334, 221409, Fax: 08284-220813
www.klsvdit.edu.in principal@klsvdit.edu.in

Date: 09-07-2022

**ಪತ್ರಿಕಾ ಪ್ರಕಟಣೆ:**

## ಆಧ್ಯಾತ್ಮ ಮತ್ತು ನಾವು ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮ

ಕೆ.ಎಲ್.ಎಸ್. ವಿ.ಡಿ.ಐ.ಟಿ. ಹಳಿಯಾಳದಲ್ಲಿ ಜುಲೈ 9ರಂದು ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳಿಗಾಗಿ "ಆಧ್ಯಾತ್ಮ ಮತ್ತು ನಾವು" ಎಂಬ ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮಕ್ಕೆ ಉಪನ್ಯಾಸಕರಾಗಿ ಹುಬ್ಬಳ್ಳಿ-ಧಾರವಾಡದ ಇಸ್ಕಾನ್ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ರಾಮ್ ಗೋಪಾಲ್ ದಾಸ್ ಅವರು ಆಗಮಿಸಿದ್ದರು. ಶ್ರೀಯುತರು ತಮ್ಮ ಗುರುಗಳಾದ ಶ್ರೀಲೀಲಾ ಪ್ರಭುಪಾದರನ್ನು ಸ್ಮರಿಸುತ್ತಾ, ಬುದ್ಧಿಮತ್ತೆಯ ಪ್ರಮಾಣ, ಭಾವನಾತ್ಮಕ ಅಂಶ, ಆಧ್ಯಾತ್ಮಿಕ ಅಂಶಗಳ ಕುರಿತು ತಿಳುವಳಿಕೆ ನೀಡಿದರು. ಭಗವದ್ಗೀತೆಯ ಶ್ಲೋಕಗಳನ್ನು ಉಪನ್ಯಾಸದಲ್ಲಿ ಉಲ್ಲೇಖಿಸುತ್ತಾ ಆಧ್ಯಾತ್ಮದ ಮಹತ್ವವನ್ನು ತಿಳಿಸಿದರು. ಮನುಷ್ಯನು ತನ್ನನ್ನು ಅರಿತುಕೊಳ್ಳಲು ವಿಷಯಾಸಕ್ತಿಯನ್ನು ಬಿಟ್ಟು, ಆಧ್ಯಾತ್ಮದಲ್ಲಿ ತೊಡಗಿಸಿಕೊಂಡರೆ ಸಫಲ ಜೀವನ ನಡೆಸಬಹುದೆಂದು ನುಡಿದರು. ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ವಿ. ಎ. ಕುಲಕರ್ಣಿ ಅವರು ಬಸವಣ್ಣ ಹಾಗೂ ದಾಸರ ವಚನಗಳನ್ನು ಸ್ಮರಿಸುತ್ತ, ಆಧ್ಯಾತ್ಮದ ಮಹತ್ವವನ್ನು ಅರಿತು ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡು ಉಜ್ವಲ ಭವಿಷ್ಯವನ್ನು ಹೊಂದುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಎಲೆಕ್ಟ್ರಾನಿಕ್ಸ್ ಹಾಗೂ ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥರಾದ ಡಾ. ಮಹೇಂದ್ರ ದೀಕ್ಷಿತ್ ಸ್ವಾಗತಿಸಿದರು. ಮಹಾವಿದ್ಯಾಲಯದ ಎನ್.ಎಸ್.ಎಸ್. ಘಟಕದ ಮುಖ್ಯಸ್ಥರಾದ ಪ್ರೊ. ವಿರೂಪಾಕ್ಷ ಚೌಗುಲ ವಂದಿಸಿದರು. ಪ್ರೊ.ವಿನಯ್ ಚಿತಾರೆ ನಿರೂಪಿಸಿದರು. ಮಹಾವಿದ್ಯಾಲಯದ ಎಲ್ಲಾ ಡೀನ್‌ಗಳು, ವಿವಿಧ ವಿಭಾಗದ ಮುಖ್ಯಸ್ಥರು, ಬೋಧಕ ಬೋಧಕೇತರ ಸಿಬ್ಬಂದಿಗಳು ಹಾಗೂ 150ಕ್ಕೂ ಅಧಿಕ ವಿದ್ಯಾರ್ಥಿಗಳು ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಮಹಾವಿದ್ಯಾಲಯದ ಎಲೆಕ್ಟ್ರಾನಿಕ್ಸ್ ಹಾಗೂ ಕಮ್ಯೂನಿಕೇಷನ್ ವಿಭಾಗ ಮತ್ತು ಎನ್.ಎಸ್.ಎಸ್. ಘಟಕ ಆಯೋಜಿಸಿತ್ತು.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology
Haliyal - 581 329 (U.K.)


KLS VDIT
Spirituality and
You !!!
KLS
VDIT


KLS VDIT